


ಒಂದೇ ಒಂದೆನ್ನುತ್ತ ಕುಹಕದ
ಕಣಿ ಹಣಿಯುತ್ತ
ಒಡಲ ಕರುಳ ಬಗೆದವರ
ಮನೆ ಬಾಗಿಲಿಗೆ ಸುಂದರ ತೋರಣವೆಂದು
ಶ್ರೇಷ್ಠತೆಯ ಮಾಲೆ ಹಾಕುತ್ತಿದ್ದಾರೆ

ಏರಿ ಏರಿ ಬರುತ್ತಾರೆ ಹಲ್ಲು, ಉಗುರುಗಳಿಲ್ಲದೆ
ಹುಲಿಗಳಂತೆ ಭಯ ಹುಟ್ಟಿಸಿ
ಶತಮಾನಗಳಿಂದ ಹುಸಿ ವೇಷದವರು

ಜೈ ಭೀಮ್ ಎಂದು ತಿರುಗಿ ನಿಂತರೆ ಹಳಸಲು
ತೂತು ಮಾತುಗಳೇ
ಮಳೆ ಬಂದರೆ ನರಿ ಬಣ್ಣ ಬಯಲು
ಊಳಿಡುತ್ತವೆ ಕಾಡಿಗೆ ಕಾಡೇ ನಡುಗಲೆಂದು

ಒಣ ಎಲೆ ಕೂಡ ಉದುರುವುದಿಲ್ಲ
ತಾನೇ ರಾಜನೆಂದು ಮೆರೆಯುತ್ತ
ಕಾಗೆಯಿಂದ ಮಾಂಸ ಕಿತ್ತುಕೊಂಡು

ನಾಲಿಗೆ ಪಸೆ ಹಾರುವ ಮುನ್ನ ಆಡಿ
ಪಿಸು ಮಾತನ್ನಾದರೂ ನೆಲಕ್ಕೆ ಕೇಳುವಂತೆ
ಗಾಳಿ ತಾಕುವಂತೆ

ಒಂದೇ ಎನುತ ಹೊನ್ನಶೂಲಕ್ಕೇರಿಸುವ ಮುನ್ನ ಬಸವಣ್ಣರಾಗಿ.